**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಃ 584/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೊಲೀಸ್ ಉಪ-ನಿರೀಕ್ಷಕರು,
ಮಂಕಿ ಪೊಲೀಸ್ ಠಾಣೆ,
ತಾಲೂಕುಃ ಹೊನ್ನಾವರ (ಉ.ಕ.)

**-ವಿರುದ್ಧ-**

ಆರೋಪಿಃ

1. ಮೊಹಮ್ಮದ್ದ ರಾಹಿಖ್ ತಂದೆ ಮೊಹಮ್ಮದ್ದ ಗೌಸ್,
ವಯಸ್ಸುಃ 23 ವರ್ಷಗಳು,
ಉದ್ಯೋಗಃ ಕಾರ್ ವಾಷ್,
ಸಾಕೀನಃ ಕಿದ್ವಾಯ್ ರೋಡ್,
ಭಟ್ಟಗಾಂ, ಭಟ್ಕಳ.

2. ಶಪಾದ ತಂದೆ ಮಹಮ್ಮದ ಇಸಾಕ್,
ವಯಸ್ಸುಃ 18 ವರ್ಷಗಳು,
ಉದ್ಯೋಗಃ ಬೆಂಗಳೂರು ಕೆಫೆಯಲ್ಲಿ ಕೆಲಸ,
ಸಾಕೀನಃ ಮೂಡುಗೋಪಾಡಿ, ಕುಂದಾಪುರ.

**ದೋಷಾರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು 1 ಮತ್ತು 2 ನೇ ಆರೋಪಿತರ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1. ಮೊದಲನೆಯದಾಗಿ ದಿನಾಂಕಃ 19-09-2024 ರಂದು ಬೆಳಗಿನ ಜಾವ 02-00ರ ಸಮಯದಲ್ಲಿ ಮಂಕಿ ಪೋಲೀಸ್ ಠಾಣಾ ಸರಹದ್ದಿನಲ್ಲಿ 1 ಮತ್ತು 2 ನೇ ಆರೋಪಿತರು ಸೇರಿಕೊಂಡು ಕಾರ್ ನಂ. ಕೆಎ-47/ಎನ್-0735 ನೇದನ್ನು ಬಳಸಿಕೊಂಡು ಇಡಗುಂಜಿ ಕ್ರಾಸ್ ಹತ್ತಿರ ಇರುವ ಗಣೇಶ ಕಾಂಪ್ಲೆಕ್ಸನಲ್ಲಿರುವ ಫಿರ್ಯಾದಿಯಾದ ಶ್ರೀಪಾದ ಮಂಜುನಾಥ ನಾಯ್ಕ ರವರ ಎಸ್.ಎಂ.ಪಿ. ಅಗ್ರಿಕಲ್ಚರ್ ಮಷಿನ್ ಮತ್ತು ಪವರ್ ಟೂಲ್ಸ್ ಅಂಗಡಿಗೆ ಬಂದು ಸದ್ರಿ ಅಂಗಡಿಯ ಶೆಟ್ರಸನ್ನು ಕಬ್ಬಿಣದ ರಾಡನಿಂದ ಮೀಟಿ ಶಟರ್ಸನ್ನು ತೆಗೆದು ಕಳ್ಳತನ ಮಾಡುವ ಉದ್ದೇಶದಿಂದ ಅಕ್ರಮ ಪ್ರವೇಶ ಮಾಡಿದ್ದು, ಈ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ 331(4) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2. ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ 1 ಮತ್ತು 2 ನೇ ಆರೋಪಿತರು ಅಂಗಡಿಯ ಒಳಗೆ ಅಕ್ರಮ ಪ್ರವೇಶ ಮಾಡಿ ಸುಮಾರು 6,000/- ರೂಪಾಯಿ ಮೌಲ್ಯದ 02 ಕ್ಲಿಪ್ ಹಾಟ್ ಎರ್ ಗನ್ ಮಷಿನಗಳನ್ನು ಕಳ್ಳತನ ಮಾಡಿಕೊಂಡು ಹೊರಗೆ ಬಂದು ಅಂಗಡಿಯ ಪಕ್ಕದಲ್ಲಿ ನಿಲ್ಲಿಸಿದ್ದ ಚಾ.ಸಾ. 11 ನೇಯವರ ಮಾಲೀಕತ್ವದ ಲಾರಿ ನಂಬರ ಕೆಎ-35/ಎ-0728 ಮತ್ತು ಜೆ ಸಿ ಬಿ ನಂಬರ್ ಕೆಎ-47/ಎನ್ 2823 ನೇದಕ್ಕೆ ಅಳವಡಿಸಿದ ಸುಮಾರು 27,000/- ರೂಪಾಯಿ ಮೌಲ್ಯದ ಆಕ್ಸಿಡ್ ಕಂಪನಿಯ 02 ಬ್ಯಾಟರಿಗಳನ್ನು ಕಳ್ಳತನ ಮಾಡಿಕೊಂಡು ಅವುಗಳನ್ನು ಮಾರಾಟ ಮಾಡಲು ಹೋಗುತ್ತಿರುವಾಗ ಸಿಕ್ಕಿಬಿದ್ದಿದ್ದು, ಈ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ 303(2) ಮತ್ತು 305 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

**Sd/-**

ದಿನಾಂಕಃ 13-02-2026

**(ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ ದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ. 584/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಮಂಕಿ ಪೊಲೀಸ್ ಠಾಣೆ,
ತಾಲೂಕುಃ ಹೊನ್ನಾವರ (ಉ.ಕ.)

**-ವಿರುದ್ಧ-**

ಆರೋಪಿಃ 1. ಮೊಹಮ್ಮದ್ದ ರಾಹಿಖ್ ತಂದೆ ಮೊಹಮ್ಮದ್ದ ಗೌಸ್,
ವಯಸ್ಸುಃ 23 ವರ್ಷಗಳು,
ಉದ್ಯೋಗಃ ಕಾರ್ ವಾಷ್,
ಸಾಕೀನಃ ಕಿದ್ವಾಯ್ ರೋಡ್,
ಭಟ್ಟಗಾಂ, ಭಟ್ಕಳ.

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

Sd/-

ದಿನಾಂಕಃ 13-02-2026 **(ಶ್ರೀ ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ. 584/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ವೃತ್ತ ನಿರೀಕ್ಷಕರು,
ಭಟ್ಕಳ ಗ್ರಾಮಾಂತರ ವೃತ್ತ

**-ವಿರುದ್ಧ-**

ಆರೋಪಿಃ 2. ಶಪಾದ ತಂದೆ ಮಹಮ್ಮದ ಇಸಾಕ್,
ವಯಸ್ಸುಃ 18 ವರ್ಷಗಳು,
ಉದ್ಯೋಗಃ ಬೆಂಗಳೂರು ಕೆಫೆಯಲ್ಲಿ ಕೆಲಸ,
ಸಾಕೀನಃ ಮೂಡುಗೋಪಾಡಿ, ಕುಂದಾಪುರ.

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

Sd/-

ದಿನಾಂಕಃ 13-02-2026 **(ಶ್ರೀ ಬಿ.ಸಿ. ಚಂದ್ರಶೇಖರ್)**
ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**